ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ,ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು-09

ಸಂಖ್ಯೆ:ಸಿಎಸಿ-05/ಬಿ.ಇಡಿ.ದಾ./01/2022-23 ದಿನಾಂಕ:14-03-2023

## 2022–23ನೇ ಸಾಲಿನ ಬಿ.ಇಡಿ ಕೋರ್ಸಿನ ಅಂತಿಮ ಸುತ್ತಿನ ದಾಖಲಾತಿಗೆ ಕಾಲೇಜು ಆದ್ಯತೆ ನೀಡಲು ಅಭ್ಯರ್ಥಿಗಳಿಗೆ ಸೂಚನೆಗಳು

2022–23ನೇ ಸಾಲಿನ ಬಿ.ಇಡಿ ಕೋರ್ಸಿಗೆ ದಾಖಲಾತಿ ಬಯಸಿ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ನೀಡಿರುವ ಮಾಹಿತಿಯ ಆಧಾರದ ಮೇಲೆ ಮೆರಿಟ್, ಮೀಸಲಾತಿ ಮತ್ತು ಆದ್ಯತೆಯ ಅನ್ವಯ ಬಿ.ಇಡಿ ಸಂಸ್ಥೆ/ಕಾಲೇಜು ಹಂಚಿಕೆ ಸಹಿತ ಆಯ್ಕೆಪಟ್ಟಿ, ಅರ್ಹತಾ ಪಟ್ಟಿ ಮತ್ತು ತಿರಸ್ಕೃತ ಪಟ್ಟಿ ಹಾಗೂ ಅಭ್ಯರ್ಥಿಗಳ ರ್‍ಯಾಂಕ್ ಪಟ್ಟಿಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ದಿನಾಂಕ:06–01–2023 ರಂದು ಪ್ರಕಟಿಸಲಾಗಿತ್ತು.

ದಿನಾಂಕ: 07–01–2023 ರಿಂದ 13–03–2023 ರವರೆಗೆ ಒಟ್ಟು 6 ಸುತ್ತುಗಳಲ್ಲಿ ಬಿ.ಇಡಿ ದಾಖಲಾತಿ ನಡೆದಿರುತ್ತದೆ ಮತ್ತು 6ನೇ ಸುತ್ತಿನ ದಾಖಲಾತಿ ಪ್ರಕ್ರಿಯೆ ಮುಗಿದ ನಂತರ ಉಳಿದಿರುವ ಸೀಟುಗಳನ್ನು ಪರಿಗಣಿಸಿ, ಅಂತಿಮ ಸುತ್ತಿನ ದಾಖಲಾತಿ ಪ್ರಕ್ರಿಯೆಗಾಗಿ ಸಂಸ್ಥೆಯವಾರು ಪ್ರವರ್ಗವಾರು [Institution wise remaining seats (category wise)] Seat Matrix ಅನ್ನು ದಿನಾಂಕ:14–03–2023 ರಂದು ಇಲಾಖಾ ವೆಬ್‌ಸೈಟ್ https://schooleducation.kar.nic.inನಲ್ಲಿ ಪ್ರಕಟಿಸಲಾಗಿದೆ.

### –:ವಿಶೇಷ ಸೂಚನೆ:–

**ಇದು ಕೊನೆಯ ಸುತ್ತಾಗಿದ್ದು ,ಅಭ್ಯರ್ಥಿಗಳ ಮನವಿಯಂತೆ ಕಾಲೇಜುಗಳಿಗೆ ಮರು ಆದ್ಯತೆ ನೀಡಲು ಕೊನೆಯ ಅವಕಾಶವಾಗಿದೆ, ಅಂತಿಮ ಸುತ್ತಿನ ಸೀಟು ಹಂಚಿಕೆಯನ್ನು ಅಭ್ಯರ್ಥಿಗಳು ಈಗ ನೀಡಿರುವ ಮರು ಆದ್ಯತೆಯನ್ನೇ ಪರಿಗಣಿಸಿ, ಸೀಟು ಹಂಚಿಕೆ ಮಾಡುವುದರಿಂದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆದ್ಯತೆ ನೀಡುವುದು. ಕಾಲೇಜುಗಳಿಗೆ ಮರು ಆದ್ಯತೆ ನೀಡದೇ ತಮಗೆ ಕಾಲೇಜು ಹಂಚಿಕೆಯಾಗದೇ ಇದ್ದರೆ ಇದಕ್ಕೆ ಅಭ್ಯರ್ಥಿಗಳೇ ನೇರ ಜವಾಬ್ದಾರರಾಗಿರುತ್ತಾರೆ.**

### ಅಂತಿಮ ಸುತ್ತಿನ ದಾಖಲಾತಿಗೆ ಪರಿಗಣಿಸಲಾಗುವ ಅಭ್ಯರ್ಥಿಗಳು

1. ಅರ್ಹತಾ ಪಟ್ಟಿಯಲ್ಲಿದ್ದು, 6ನೇ ಸುತ್ತಿನವರೆವಿಗೂ ಒಂದೂ ಬಾರಿಯೂ ಸೀಟು ಹಂಚಿಕೆಯಾಗದ ಅರ್ಹ ಪಟ್ಟಿಯಲ್ಲಿರುವ ಉಳಿಕೆ ಅಭ್ಯರ್ಥಿಗಳಿಗೆ ಅವಕಾಶ ನೀಡಿದೆ.
2. ಆಯ್ಕೆಪಟ್ಟಿಯಲ್ಲಿದ್ದು, ರೋಸ್ಟರ್ ಮತ್ತು ಮೆರಿಟ್ ಅನ್ವಯ ಆದ್ಯತೆ ನೀಡಿರುವ ಕಾಲೇಜುಗಳಿಗೆ ಒಂದೂ ಬಾರಿಯೂ ಕಾಲೇಜು ಹಂಚಿಕೆಯಾಗದೇ ** ಗುರುತು ನಮೂದಾಗಿರುವ ಅಭ್ಯರ್ಥಿಗಳಿಗೆ ಅವಕಾಶವನ್ನು ನೀಡಿದೆ.

3. ಅರ್ಹತಾ ಪಟ್ಟಿಯಲ್ಲಿದ್ದು, 6ನೇ ಸುತ್ತಿನಲ್ಲಿ ರೋಸ್ಟರ್ ಮತ್ತು ಮೆರಿಟ್ ಅನ್ವಯ ಆದ್ಯತೆ ನೀಡಿರುವ ಕಾಲೇಜುಗಳಿಗೆ ಕಾಲೇಜು ಹಂಚಿಕೆಯಾಗದೇ ** ಗುರುತು ನಮೂದಾಗಿರುವ ಅಭ್ಯರ್ಥಿಗಳಿಗೆ ಅವಕಾಶವನ್ನು ನೀಡಿದೆ.
4. ಜಿಲ್ಲಾ ವ್ಯವಸ್ಥಾಪಕ ಕೇಂದ್ರಗಳಲ್ಲಿ 6ನೇ ಸುತ್ತಿನಲ್ಲಿ ಬಿ.ಇಡಿ ದಾಖಲಾತಿಗಾಗಿ ನಡೆದ ಮೂಲದಾಖಲೆಗಳ ಪರಿಶೀಲನಾ ವೇಳೆಯಲ್ಲಿ ಪರಿಶೀಲನಾಧಿಕಾರಿಗಳು ಪರಿಶೀಲಿಸಿದಂತೆ ಪದವಿ/ಅಥವಾ ಸ್ನಾತಕ ಪದವಿ ಅಂಕಗಳು ವ್ಯತ್ಯಾಸವಾಗಿ ದಾಖಲಾತಿಯಾಗದಿರುವ ಅಭ್ಯರ್ಥಿಗಳಿಗೆ ಅಂತಿಮ ಸುತ್ತಿನ ದಾಖಲಾತಿಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿದೆ.

**ಅಂತಿಮ ಸುತ್ತಿನ ದಾಖಲಾತಿಗೆ ಪರಿಗಣಿಸಲಾಗುವ ಅಭ್ಯರ್ಥಿಗಳಿಗೆ ವಿಶೇಷ ಸೂಚನೆ:** ಅಂತಿಮ ಸುತ್ತಿಗೆ ಪರಿಗಣಿಸಲಾಗುವ ಅಭ್ಯರ್ಥಿಗಳು ಬಿ.ಇಡಿ ದಾಖಲಾತಿಗೆ ಇಚ್ಛಿಸಿದಲ್ಲಿ, ಅಭ್ಯರ್ಥಿಯು ತಮ್ಮ ಲಾಗಿನ್ ಪುಟದಲ್ಲಿ ನೀಡಿರುವ ಅಂಕಣದಲ್ಲಿ YES/No ಎಂದು ನಮೂದಿಸಲು ಅವಕಾಶ ಕಲ್ಪಿಸಲಾಗಿದೆ. YES ಎಂದು ನಮೂದಿಸಿದ್ದಲ್ಲಿ ಮಾತ್ರ ಅಂತಹ ಅಭ್ಯರ್ಥಿಗಳನ್ನು ಆಯ್ಕೆ ಮತ್ತು ದಾಖಲಾತಿ ಪ್ರಕ್ರಿಯೆಗೆ ಪರಿಗಣಿಸಲಾಗುವುದು. ಅಂಕಣದಲ್ಲಿ No ಎಂದು ನಮೂದಿಸಿದ್ದಲ್ಲಿ ಅಥವಾ ಏನನ್ನೂ ನಮೂದಿಸದ ಅಭ್ಯರ್ಥಿಗಳಿಗೆ ಸೀಟು ಹಂಚಿಕೆಯಾಗುವುದಿಲ್ಲ. ಇದಕ್ಕೆ ಅಭ್ಯರ್ಥಿಗಳೇ ನೇರ ಜವಾಬ್ದಾರರಾಗಿರುತ್ತಾರೆ.

**ಮೇಲ್ಕಂಡ ಅಭ್ಯರ್ಥಿಗಳು** ಇಲಾಖಾ ವೆಬ್‌ಸೈಟ್‌ನಲ್ಲಿ ದಿನಾಂಕ: 14-03-2023 ಪ್ರಕಟಿಸಿದ Seat Matrix ಅನ್ನು ಪರಿಶೀಲಿಸಿಕೊಂಡು, ವಿವಿಧ ಕಾಲೇಜುಗಳಲ್ಲಿ ತಮಗೆ ಅನ್ವಯವಾಗುವಂತೆ ಲಭ್ಯವಿರುವ ಸೀಟುಗಳಿಗೆ ನಿಮ್ಮ User ID ಮತ್ತು Password ಮೂಲಕ ಮತ್ತೊಮ್ಮೆ ಲಾಗಿನ್ ಆಗಿ ಆನ್‌ಲೈನ್ ಅರ್ಜಿಯಲ್ಲಿ **ದಿನಾಂಕ:15-03-2023 ರಂದು (ಒಂದು ದಿನ ಮಾತ್ರ ಅವಕಾಶ)** ಕಾಲೇಜು/ಸಂಸ್ಥೆಯ ಮರು ಆದ್ಯತೆಯನ್ನು (*Option Entry*/Institution choice) ನಮೂದಿಸುವುದು. ಈ ಹಿನ್ನೆಲೆಯಲ್ಲಿ ಅಭ್ಯರ್ಥಿಗಳು ತಮ್ಮ ಮೆರಿಟ್ ಮತ್ತು ರೋಸ್ಟರ್ ಅನ್ವಯ ಪ್ರಕಟಿಸಲಾದ Seat Matrix ನಂತೆ ಸೀಟು ಲಭ್ಯವಿರುವ ಕಾಲೇಜುಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮರು ಆಧ್ಯತೆಯನ್ನು ನೀಡುವುದು. (ಮರು ಆಧ್ಯತೆಯನ್ನು ಸೀಟು ಲಭ್ಯವಿರುವ ಎಲ್ಲಾ ಕಾಲೇಜುಗಳಿಗೆ ನೀಡಬಹುದು. ಕಾಲೇಜುಗಳಿಗೆ ಆಧ್ಯತೆ ನೀಡುವ ಸಂಬಂಧ ಯಾವುದೇ ಮಿತಿಯನ್ನು ನಿಗದಿಗೊಳಿಸಿರುವುದಿಲ್ಲ). ಈ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಲೇಜುಗಳಿಗೆ ಮರು ಆಧ್ಯತೆಯನ್ನು ನಮೂದಿಸುವುದು. ಕಡಿಮೆ ಸಂಖ್ಯೆಯ ಕಾಲೇಜುಗಳಿಗೆ ಆಧ್ಯತೆ ನೀಡಿ ಕಾಲೇಜು ಹಂಚಿಕೆಯಾಗದಿದ್ದಲ್ಲಿ ಅಭ್ಯರ್ಥಿಗಳೇ ನೇರ ಜವಾಬ್ದಾರರಾಗಿರುತ್ತಾರೆ.

ಸಹಿ/-
ವಿಶೇಷಾಧಿಕಾರಿ
ಕೇಂದ್ರೀಕೃತ ದಾಖಲಾತಿ ಘಟಕ